ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ
ಸಿಸಿ ನಂಬರ. 557/2023

ಸಿ ಡಬ್ಲ್ಯೂ-8
ಪಿ ಡಬ್ಲ್ಯೂ- 5

ದಿಃ 07-12-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಸಾಕ್ಷಿಯ ಹೆಸರುಃ ಉಮೇಶ ನಾಯ್ಕ
ತಂದೆಯ ಹೆಸರುಃ ಬಿಕಾರಿಯಾ
ವಯಸ್ಸುಃ 64 ವರ್ಷ
ಉದ್ಯೋಗಃ ರಿಕ್ಷಾ ಚಾಲಕ
ವಿಳಾಸಃ ಬಾವೀಕೇರಿ

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ

ನನಗೆ ಚಾಸಾ-9 ರಿಂದ 11 ರವರ ಪರಿಚಯವಿರುತ್ತದೆ. ದಿಃ12-04-2023 ರಂದು ಬಾವೀಕೇರಿಯ ಆಲದ ಮರದ ಕಟ್ಟೆಯ ಹತ್ತಿರ ಒಂದು ಆಟೋ ರಿಕ್ಷಾ ಅಪಘಾತವಾಗಿತ್ತದೆ, ಆ ಸಮಯದಲ್ಲಿ ನಾನು ಇರಲಿಲ್ಲ. ಅಪಘಾತಕ್ಕೆ ಒಳಪಟ್ಟ ಹುಡುಗಿಯನ್ನು ಓಮ್ನಿ ವಾಹನದಲ್ಲಿ ಚಾಸಾ-9 ಮತ್ತು 11 ರವರು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಪೊಲೀಸರು ಬಂದು ಎಲ್ಲರನ್ನು ವಿಚಾರಣೆ ಮಾಡಲಾಗಿ ನನ್ನ ಹೆಸರನ್ನೂ ಸಹ ತೆಗೆದುಕೊಂಡು ಹೋಗಿರುತ್ತಾರೆ. ಇಷ್ಟೇ ನನಗೆ ಗೊತ್ತಿರುವುದು. ಮತ್ತೆ ಏನೂ ಗೊತ್ತಿರುವುದಿಲ್ಲ. ಆಟೋ ರಿಕ್ಷಾ ಅಪಘಾತಪಡಿಸಿರುತ್ತದೆ. ಅದರ ಸಂಖ್ಯೆ ಕೆ ಎ 30

ಎ 5087 ಆಗಿರುತ್ತದೆ.  ಆಟೋ ರಿಕ್ಷಾದ ಚಾಲಕ ಯಾರು ಎಂದು ಗೊತ್ತಿರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ ಒಬ್ಬ ಆರೋಪಿ ಯಾರು ಎಂದು ಗೊತ್ತಿರುವುದಿಲ್ಲ, ಒಬ್ಬರು ಆಟೋ ರಿಕ್ಷಾದ ಚಾಲಕನಾಗಿರುತ್ತಾನೆ. ಅಪಘಾತಕ್ಕೆ ಸಂಬಂಧಪಟ್ಟಂತೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಇವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟಿ ಸವಾಲಿಗೆ ಅನುಮತಿ ಕೋರಿದ್ದು, ಅನುಮತಿಸಲಾಯಿತು.)

<u>ಪಾಟಿ ಸವಾಲುಃ</u> ಮಾನ್ಯ ಎ.ಪಿ.ಪಿ.ಯವರಿಂದ

2. ಅಪಘಾತವಾದ ದಿನ ನೀವು ನಿಮ್ಮ ಮನೆಯ ಅಂಗಳದಲ್ಲಿ ಕುರ್ಚಿ ಹಾಕಿಕೊಂಡು ವಿಶ್ರಾಂತಿ ಪಡೆಯುತ್ತಿದ್ದೀರಿ ಎಂದರೆ ಸರಿಯಲ್ಲ.  ವಿಶ್ರಾಂತಿ ಪಡೆಯುವ ಸಮಯದಲ್ಲಿ ಸುಮಾರು ರಾತ್ರಿ 8.45 ಗಂಟೆಗೆ ಮೃತ ಶೋಭಾ ಹಾಗೂ ಚಾಸಾ-1 ರವರು ನಿಮ್ಮ ಮನೆಯ ಮುಂದೆ ಇರುವ ರಸ್ತೆಯ ಮೇಲೆ ನೆಡೆದುಕೊಂಡು ಹೋಗುತ್ತಿರುವಾಗ ನೀವು ಮುಖ್ಯ ವಿಚಾರಣೆಯಲ್ಲಿ ಹೇಳಿದಂತಹ ಆಟೋ ರೀಕ್ಷಾ ಹಿಂದಿನಿಂದ ಹೋಗಿ ಡಿಕ್ಕಿ ಪಡಿಸಿರುತ್ತದೆ ಎಂದರೆ ಆ ಸಮಯದಲ್ಲಿ ನಾನು ಇರುವುದಿಲ್ಲ. ಆ ಸಮಯದಲ್ಲಿ ಆಕೆಗೆ ತಲೆಯ ಬಲಬದಿಗೆ ಹಾಗೂ ಮೂಗಿನಿಂದ ರಕ್ತ ಬರುತ್ತಿದ್ದು, ನೀವು ಹೋಗಿ ಆ ಸಮಯದಲ್ಲಿ ಉಪಚಾರ ಮಾಡಿರುತ್ತೀರಿ ಎಂದರೆ ನಾನು ಆ ಸಮಯದಲ್ಲಿ ಇರಲಿಲ್ಲ. ನೀವು ಸದರಿ ಅಪಘಾತವು ಆಟೋ ರಿಕ್ಷಾದ ಚಾಲಕನ ವೇಗ ಹಾಗೂ ನಿರ್ಲಕ್ಷತನಿಂದ

ಆಗಿರುತ್ತದೆ ಎಂದು ಹೇಳಿಕೆಯನ್ನು ಕೊಟ್ಟಿರುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯ ಭಾಗವನ್ನು ನಿಪಿ-12 ಎಂದು ಗುರುತಿಸಲಾಯಿತು. ನಂತರ ಅವರನ್ನು ಆರ್ಯಾ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದು ಹೇಳಿರುತ್ತೀರಿ ಎಂದರೆ ಸಾಕ್ಷಿಯು ಓಮ್ನಿ ವಾಹನದ ಮುಖಾಂತರ ಕರೆದುಕೊಂಡು ಹೋಗಿರುತ್ತಾರೆ ಎಂದು ನನ್ನ ಹೆಂಡತಿ ನನಗೆ ಹೇಳಿರುತ್ತಾರೆ. ಅಪಘಾತಕ್ಕೆ ಸಂಬಂಧಪಟ್ಟ ನೀವು ನೋಡಿದ್ದ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಮತ್ತು ಆರೋಪಿತನು ರಿಕ್ಷಾ ನಿಲ್ಲಿಸದೇ ಹೋಗಿದ್ದು, ಆತನನ್ನು ನಾನು ಗುರುತಿಸುತ್ತೇನೆ ಎಂದು ಹಾಗೂ ಆತನ ಹೆಸರನ್ನು ರವಿ ದಯಾನಂದ ನಾಯಕ ಎಂದು ಹೇಳಿ ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಿಮಗೆ ಆರೋಪಿಯ ಪರಿಚಯವಿರುವುದರಿಂದ ಹಾಗೂ ಆತನೂ ಸಹ ಆಟೋ ರಿಕ್ಷಾದ ಚಾಲಕನಾಗಿದ್ದರಿಂದ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u> ಆರೋಪಿ ಪರ ವಕೀಲರಾದ ಶ್ರೀ ವಿ.ವಿ.ಎಸ್ ಇವರಿಂದಃ

3. ನೀವು ಆಟೋ ರಿಕ್ಷಾದ ಸಂಖ್ಯೆಯನ್ನು ಯಾರಿಂದಲೋ ತಿಳಿದುಕೊಂಡು ಹೇಳಿರುತ್ತೀರಿ ಎಂದರೆ ಸರಿ. ನೀವು ಸಾಕಷ್ಟು ಸಲ ನ್ಯಾಯಾಲಯಕ್ಕೆ ಬಂದಿರುತ್ತೀರಿ ಎಂದರೆ ಸರಿ.

ಯಾವ ಪ್ರಕರಣಕ್ಕೆ ಬಂದಿರುತ್ತೀರಿ ಎಂದರೆ ಸಾಕ್ಷಿಯು ಹುಡುಗನು ಜಗಳ ಮಾಡಿಕೊಂಡಿದ್ದರಿಂದ ಬಂದಿದ್ದೆ ಎಂದು ನುಡಿಯುತ್ತಾರೆ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಜೆ.ಎಂ.ಎಫ್.ಸಿ., ಅಂಕೋಲಾ.